ರೂಪಾಯಿಗಳನ್ನು ಕೊಡುತ್ತೇವೆಂದು ಒಪ್ಪಿಕೊಂಡಿದ್ದೀರಿ. ಇದನ್ನು ನಾವು ಸ್ವಾಗತ ಮಾಡುತ್ತೇವೆ. ಈ ವಾರದಲ್ಲಿ ಬಿಡುಗಡೆ ಮಾಡಿದರೆ ಅದಕ್ಕೆ ಒಂದು ರೂಪ ಬರುತ್ತದೆ. ದಯವಿಟ್ಟು ಒಂದು ವಾರದಲ್ಲಿ ಬಿಡುಗಡೆ ಮಾಡುತ್ತೇವೆಂದು ಹೇಳಿ.

ಶ್ರೀ ಎಂ.ಪಿ. ಪ್ರಕಾಶ್ :— ಮಾನ್ಯ ಅಧ್ಯಕ್ಷರೇ, ಲೋಕೋಪಯೋಗಿ ಇಲಾಖೆಗೆ ಸಂಬಂಧಪಟ್ಟಂತೆ ಸರ್ಕಾರದಲ್ಲಿ ಆಗಿರುವ ನಿರ್ಧಾರವನ್ನು ನಾನು ಪತ್ರಿಕೆಗಳಿಗೆ ಹೇಳಿದೆ. ಮಾನ್ಯ ಲೋಕೋಪಯೋಗಿ ಇಲಾಖಾ ಸಚಿವರು ಈ ಬಗ್ಗೆ ಕ್ರಮ ಕೈಗೊಳ್ಳುತ್ತಿದ್ದಾರೆ. ಮಳೆಗಾಲದಲ್ಲಿ ಈ ಕೆಲಸ ಮಾಡುವುದಕ್ಕೆ ಆಗುವುದಿಲ್ಲ ಎನ್ನುವುದು ನಮಗೆ ಗೊತ್ತು ಆದ್ದರಿಂದ ಅತಿ ಶೀಘ್ರವಾಗಿ ಈ ಕೆಲಸ ಮಾಡುತ್ತೇವೆ. ನಾನು ನೇರವಾಗಿ ಇಂತಿಷ್ಟೇ ಅವಧಿ ಎಂದು ಹೇಳಲಾರೆ. ಆದರೆ ಆದಷ್ಟು ಬೇಗನೆ ಎಂದು ಹೇಳಬಯಸುತ್ತೇನೆ. ಏಕೆಂದರೆ ನಿಮಷ್ಟೇ ನಾವು ಕೂಡ ಉತ್ಸುಕರಾಗಿದ್ದೇವೆ. ನಾನು ಮಂತ್ರಿಯಾಗಿದ್ದರೂ ಕೂಡ ಶಾಸಕನೂ ಕೂಡ ಆಗಿರುವುದರಿಂದ ನನ್ನ ಕ್ಷೇತ್ರಕ್ಕೂ 50 ಲಕ್ಷ ರೂಪಾಯಿಗಳು ಬರುತ್ತವೆ.

ಶ್ರೀ ಮಾಟಾಳ್ ನಾಗರಾಜ್ :— ತಾವುಗಳು ಸರಕಾರದ ನಿರ್ಧಾರವನ್ನು ಹೇಳಿದ್ದೀರಿ ಅದನ್ನು ನಾನು ಸ್ವಾಗತಿಸುತ್ತೇನೆ. ಆದರೆ ಆ ನಿರ್ಧಾರದ ಪ್ರಕಾರವಾಗಿ ಸರಕಾರದವರು ಕಟ್ಟುನಿಟ್ಟಾಗಿ ಯಾವಾಗಿನಿಂದ ಕೊಡುತ್ತೀರಿ ಎಂಬುದನ್ನು ತಾವುಗಳು ಹೇಳಬೇಕು.

ಶ್ರೀ ಎಂ.ಪಿ. ಪ್ರಕಾಶ್ :— ಆದಷ್ಟು ಶೀಘ್ರವಾಗಿ ಈ ಹಣವನ್ನು ಬಿಡುಗಡೆ ಮಾಡುತ್ತೇವೆ.

ಅಧ್ಯಕ್ಷರು :— ಪ್ರಶ್ನೋತ್ತರಗಳು ಮುಗಿದವು.

ಅ) ಚುಕ್ಕೆ ಗುರುತಿಲ್ಲದ ಪ್ರಶ್ನೆಗಳಿಗೆ ಲಿಖಿತ ಮೂಲಕ ನೀಡಲಾದ ಉತ್ತರಗಳು.

ಶ್ರೀ ಸಿ. ಬೈರೇಗೌಡ (ಕೃಷಿ ಮತ್ತು ತೋಟಗಾರಿಕೆ ಸಚಿವರು) :— ಸನ್ಮಾನ್ಯ ಅಧ್ಯಕ್ಷರೇ, 2ನೇ ಪಟ್ಟಿಯಲ್ಲಿರುವ ಈ ಸಮೂಹದ ಲಿಖಿತ ಮೂಲಕ ಉತ್ತರಿಸುವ ಒಟ್ಟು 42 ಪ್ರಶ್ನೆಗಳ ಪೈಕಿ 36 ಪ್ರಶ್ನೆಗಳಿಗೆ ಉತ್ತರಗಳನ್ನು ಸದನದಲ್ಲಿ ಮಂಡಿಸುತ್ತೇನೆ.

ಹಿರೇಕೆರೂರು ತಾಲ್ಲೂಕಿನಲ್ಲಿ ಆರೋಗ್ಯ ಇಲಾಖೆಯಿಂದ ತೆಗೆದುಕೊಂಡ ಯೋಜನೆಗಳು.

24(11) ಉಚ್ಚೈಗೆನೇಶ್ವರ ಬವಸವನಪ್ಪ ಬಣಕಾರ್ (ಹಿರೇಕೆರೂರು):— ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ) ಹಿರೇಕೆರೂರು ತಾಲ್ಲೂಕಿನಲ್ಲಿ ದವಾಖಾನೆಗಳ ಕಟ್ಟಡ ನಿರ್ಮಾಣದ ಬಗ್ಗೆ ತೆಗೆದುಕೊಂಡ ಯೋಜನೆಗಳು ಯಾವುವು;

ಆ) ಅವುಗಳು ಯಾವ ಹಂತದಲ್ಲಿವೆ ಹಾಗೂ ಯಾವಾಗ ಪೂರ್ಯೆಸಲಾಗುವುದು?